# ‘ಬಸ್ ಚಾರ್ಜಿಗೂ ಪರದಾಡಿದ್ದೆ

## ಕಾವೇರಿ
### ಕಲರ್ಸ್ ಕನ್ನಡದ ‘ಗಿಣಿರಾಮ’ ಸೀಮಾ

**◆ ನಿಮ್ಮ ಪರಿಚಯವನ್ನು ಹೇಳಬಹುದೇ?**

ಬಾಗಲಕೋಟೆ ಜಿಲ್ಲೆ ಬೀಳಗಿ ತಾಲ್ಲೂಕಿನ ಹೆರ್ಕಲ್ ನನ್ನ ಹುಟ್ಟೂರು. ತಂದೆ ಹೆಸರು ಬಸವಲಿಂಗಪ್ಪ, ಅಮ್ಮ ಸುಜ್ಞಾನಿ. ತಂದೆ 9 ವರ್ಷಗಳ ಹಿಂದೆ ತೀರಿ ಹೋಗಿದ್ದಾರೆ. ನನಗೆ ಒಬ್ಬಳು ಅಕ್ಕ, ಅವಳದು ಮದುವೆ ಆಗಿದೆ. ಅಮ್ಮ ಬಟ್ಟೆ ವ್ಯಾಪಾರ ಮಾಡಿ ನಮ್ಮ ಹೊಟ್ಟೆ ಹೊರೆದಿದ್ದಾರೆ. ಈಗ ನಾನು ಅಮ್ಮ ಬೆಂಗಳೂರಿಗೆ ಬಂದು ನೆಲೆಸಿದ್ದೇವೆ. ನಮ್ಮೂರು ನಮಗೆ ಚಂದ. ಅದೊಂದು ರೀತಿಯ ಭಾವನಾತ್ಮಕ ಸೆಳೆತ. ಊಟೋಪಚಾರ– ವೇಷಭೂಷಣಗಳು ಮೆಚ್ಚುಗೆ ಆಗುತ್ತವೆ. ಆದರೆ ಬೆಂಗಳೂರು ಬದುಕು ರೂಪಿಸುತ್ತದೆ.

**◆ ಅಭಿನಯದ ಆಸಕ್ತಿ ಮೂಡಿದ್ದು ಹೇಗೆ?**

ಚಿಕ್ಕವಳಿದ್ದಾಗ ನನ್ನಪ್ಪ ಮುಂದೆ ನೀನು ಅಭಿನಯ ಮಾಡಬೇಕು ಕಲಾವಿದೆಯಾಗಿ ಬೆಳೆಯಬೇಕು ಎಂದು ಆಶಿಸುತ್ತಿದ್ದರು. ನನಗೂ ಅದು ಆಸಕ್ತಿಯನ್ನು ಹುಟ್ಟಿಸಿತು. ಬಿಕಾಂ ಮುಗಿದ ತಕ್ಷಣ ಗಿಣಿರಾಮಕ್ಕೆ ಆಡಿಷನ್ ನೀಡಲು ಕರೆ ಬಂತು. ಆಡಿಷನ್ ನೀಡಿದೆ, ಆಯ್ಕೆಯೂ ಆದೆ. ಉತ್ತರ ಕರ್ನಾಟಕಕ್ಕೆ ಸಂಬಂಧಿಸಿದ ಶೈಲಿ ಆಗಿದ್ದರಿಂದ ಪಾತ್ರವನ್ನು ಸರಳವಾಗಿ ನಿರ್ವಹಣೆ ಮಾಡಿದೆ. ಇದು ನನ್ನಲ್ಲಿ ವೃತ್ತಿ ಪ್ರೇಮವನ್ನು ಹುಟ್ಟಿಸುವ ಜೊತೆಗೆ ನಟನೆಯನ್ನು ಕಲಿಸುತ್ತಿದೆ.

**◆ ಅಭಿನಯದ ಮೂಲತತ್ವ ಕಲಿಯಲು ಮಾಡಿದ ತಾಲೀಮು ಹೇಗಿತ್ತು?**

ಮೊದಲಿನಿಂದಲೂ ಹಣಕಾಸಿನ ದೃಷ್ಟಿಯಿಂದ ಕಷ್ಟವನ್ನು ಎದುರಿಸುತ್ತಿದ್ದೆವು. ಹಾಗಾಗಿ ನನ್ನ ಆಸೆಯ ಕಲೆಯನ್ನು ಕಲಿಯಲು ತರಗತಿಗೂ ಹೋಗಲು ಸಾಧ್ಯ ಆಗಲಿಲ್ಲ. ಕಿರುತೆರೆಗೆ ಆಡಿಷನ್ ಕೊಡಲು ಬೆಂಗಳೂರಿಗೆ ಬರಲೂ ಬಸ್ ಚಾರ್ಜ್‌ಗೆ ದುಡ್ಡು ಇರ್ತಾ ಇರಲಿಲ್ಲ. ಈ ಕಾರಣಕ್ಕೆ ಕೆಲವು ಅವಕಾಶವನ್ನು ಕಳೆದುಕೊಂಡಿದ್ದೇನೆ.

ಹೀಗಿರುವಾಗ ನಟನೆಗೆ ಪೂರಕವಾಗುವ ಸಂಗೀತ– ನೃತ್ಯ– ನಟನೆಯ ತರಬೇತಿ ಅಥವಾ ಕಾರ್ಯಾಗಾರಗಳನ್ನು ತೆಗೆದುಕೊಳ್ಳಲು ಹೇಗೆ ಸಾಧ್ಯ? ನೇರವಾಗಿ ಅಭಿನಯ ವೃತ್ತಿಗೆ ಬಂದೆ. ಈಗ ನಟನೆಯ ತತ್ವ ಕಲಿಯುತ್ತಿದ್ದೇನೆ. ಆರಂಭದಲ್ಲಿ ತುಂಬ ಕಷ್ಟ ಆಯಿತು. ಒಂದು ಕಡೆ ಆರ್ಥಿಕ ಸಮಸ್ಯೆ. ಮತ್ತೊಂದೆಡೆ ಬಣ್ಣದ ಹೊಸಲೋಕಕ್ಕೆ ಹೊಂದಿಕೊಳ್ಳಬೇಕಿತ್ತು.

**◆ ನಾಯಕಿಯ ತಂಗಿಯಾಗಿ ನಿಮ್ಮ ಪಾತ್ರ ಹೇಗೆ ಗೆಲ್ಲುತ್ತದೆ?**

ಈ ಪಾತ್ರ ನಾಯಕ ಅಥವಾ ನಾಯಕಿಯ ಮಟ್ಟಕ್ಕೆ ಸಮವಾಗಿದೆ ಎಂದು ಅನಿಸುತ್ತದೆ. ಅದರ ಆಂತರ್ಯದಲ್ಲಿ ಅಂತಹ ಸಾಮರ್ಥ್ಯ ಇದೆ ಎನ್ನುವುದು ನನ್ನ ಭಾವನೆ. ಕಥೆಯಲ್ಲಿ ಸೀಮಾ ಪಾತ್ರಕ್ಕೆ ಹೆಚ್ಚಿನ ಮಹತ್ವವನ್ನು ಕೊಟ್ಟಿದ್ದಾರೆ. ಪಾತ್ರವಾಗಿ ನಾನು ಎಲ್ಲರ ಜೊತೆ ಪ್ರೀತಿಯಿಂದ ಬೆರೆಯುತ್ತೇನೆ. ಎಲ್ಲರಿಗೂ ಒಳ್ಳೆಯದಾಗಲಿ ಎಂದು ಬಯಸುತ್ತೇನೆ. ಒಳ್ಳೆಯದನ್ನೇ ಮಾಡುತ್ತೇನೆ. ಯಾರಿಗಾದೂ ಕೆಟ್ಟದಾಗಿದ್ದರೆ ಮರುಗುತ್ತೇನೆ. ಆದರ್ಶಗಳನ್ನು ಮೈಗೂಡಿಸಿಕೊಂಡಿರುವ ಪಾತ್ರ ತುಂಬ ಚೆನ್ನಾಗಿದೆ ನನಗೆ ಇಷ್ಟ ಕೂಡ ಆಗಿದೆ. ಚೆನ್ನಾಗಿ ಮಾತನಾಡಿಕೊಂಡು ಲವಲವಿಕೆಯಿಂದ ಇರುವ ಪಾತ್ರ ಬೋರು ಅನ್ನಿಸುವ ಪ್ರಶ್ನೆಯೇ ಇಲ್ಲ.



**◆ ಸೆಟ್‌ನಲ್ಲಿ ಮೊದಲ ದಿನ ಬಣ್ಣ ಹಚ್ಚಿದಾಗ ಹೇಗಿತ್ತು?**

ನಟನೆ ಗೊತ್ತಿರದ ನನಗೆ ಚಿತ್ರೀಕರಣವೇ ಹೊಸತು. ಕೆಲಸ ಮಾಡುವುದಿರಲಿ ನೋಡಿಯೂ ಇರಲಿಲ್ಲ. ನಿರ್ದೇಶಕ ಪ್ರೀತಂ ಶೆಟ್ಟಿ ತುಂಬ ಪ್ರೋತ್ಸಾಹ ನೀಡಿದರು. ಸಿನಿಮಾಟೋಗ್ರಾಫರ್ ಪವನ್ ಕೂಡ ಹೇಳಿಕೊಟ್ಟರು. ಅಭಿನಯವನ್ನು ನನಗೆ ಕಲಿಸುವ ವಿಷಯದಲ್ಲಿ ಸಹನಟರೂ ಪ್ರಮುಖ ಪಾತ್ರವನ್ನು ವಹಿಸಿದ್ದಾರೆ. ಅವರೆಲ್ಲ ಹೇಳಿಕೊಡದಿದ್ದರೆ ಇನ್ನೂ ಕಷ್ಟ ಆಗ್ತಿತ್ತು. ನಮ್ಮ ಸೀಮೆಯ ಸೊಗಡು ಇರುವುದು ಹೊಂದಿಕೊಳ್ಳಲು ಅನುಕೂಲ ಆಯಿತು. ಈಗ ಚೆನ್ನಾಗಿ ಬರ್ತಾ ಇದೆ.

**◆ ನಟಿ ಆಗದಿದ್ದರೆ ಏನು ಮಾಡ್ತಿದ್ರಿ?**

ಸಂಪಾದನೆಯ ಅನಿವಾರ್ಯತೆ ಇತ್ತು. ಏನಾದರೂ ಕೆಲಸ ಮಾಡುತ್ತಿದ್ದೆ. ಶಿಕ್ಷಣವನ್ನು ಮುಂದುವರೆಸಬೇಕು ಎನ್ನುವ ಆಸೆಯೂ ಇದೆ. ಮುಂದೆ ಎಂಕಾಂ ಮಾಡುವ ಉದ್ದೇಶವಿದೆ. ನನ್ನ ದೃಷ್ಟಿ ನಟನೆಯತ್ತವೆ ನೆಟ್ಟಿತ್ತು. ಇಲ್ಲೇ ಬೆಳೆಯಬೇಕು ಎಂದು ಅಂದುಕೊಂಡಿದ್ದೇನೆ. ಈಗ ಬೆಂಗಳೂರಿಗೆ ಬಂದಿದ್ದೇನೆ. ಬದುಕಿನ ಹೋರಾಟವನ್ನು ಇಲ್ಲಿ ಕಲಿಯುತ್ತೇನೆ. ನಟನೆಯಲ್ಲೇ ಬದುಕು ರೂಪಿಸಿಕೊಳ್ಳುತ್ತೇನೆ ಎನ್ನುವ ವಿಶ್ವಾಸ ಇದೆ. ಇಲ್ಲಿಯೂ ಅದರದ್ದೇ ಆದ ಸವಾಲುಗಳಿವೆ. ಇದರ ನಂತರ ಮುಂದೆ ಏನು ಮಾಡಬೇಕು ಎನ್ನುವ ಪ್ರಶ್ನೆ ಸಹಜವಾಗಿ ಏಳುತ್ತದೆ. ಮುಂದೆ ಅವಕಾಶ ಸಿಕ್ಕರೆ ನಾಯಕಿಯಾಗಿಯೂ ನಟಿಸಬಹುದು. ಸದ್ಯ ಇದನ್ನು ಬಿಟ್ಟು ಬೇರೆ ಏನ್ನನ್ನೂ ಯೋಚಿಸುತ್ತಿಲ್ಲ. ಬಿಡುವಿನ ವೇಳೆಯಲ್ಲಿ ಬಟ್ಟೆ ಹೊಲಿಯುತ್ತೇನೆ. ಸಾಮಾನ್ಯವಾಗಿ ನನ್ನ ಡ್ರೆಸ್ ನಾನೇ ವಿನ್ಯಾಸ ಮಾಡುತ್ತೇನೆ. ನನ್ನ ಅನೇಕ ಆತ್ಮೀಯರಿಗೂ ಡ್ರೆಸ್ ಹೊಲಿದುಕೊಡುತ್ತೇನೆ. ಈ ರೀತಿಯ ಚಟುವಟಿಕೆ ಇಷ್ಟ ಆಗುತ್ತದೆ. ಸಮಯವನ್ನು ವ್ಯರ್ಥ ಮಾಡುವುದು ಇಷ್ಟ ಆಗುವುದಿಲ್ಲ.

**◆ ಸನ್ನಿವೇಶ ಬದಲಾದಾಗ ಹೇಗೆ ತಯಾರಿ ಆಗುತ್ತೀರಿ?**

ದೃಶ್ಯಗಳು ಬದಲಾಗುವ ಸಂದರ್ಭದಲ್ಲಿ ಮೊದಲೇ ನಮಗೆ ತಿಳಿಸಿರುತ್ತಾರೆ. ಇತ್ತೀಚೆಗೆ ಗಣೇಶ ಹಬ್ಬಕ್ಕೆ ಸಂಬಂಧಿಸಿದ ದೃಶ್ಯಗಳು ಇದ್ದವು. ಅದಕ್ಕೆ ಪೂರಕವಾಗಿ ಇರುವಂತೆ ನಮ್ಮ ವೇಷಭೂಷಣವನ್ನು ಸಿದ್ಧಪಡಿಸಿಕೊಂಡಿರುತ್ತೇವೆ. ಹಾಗೆಯೇ ಪಾತ್ರಕ್ಕೂ ಸಿದ್ಧತೆ ಮಾಡಿಕೊಳ್ಳುತ್ತೇವೆ.

■ ರಾಘವೇಂದ್ರ ಕೆ.